ಕರ್ನಾಟಕ ಸರಕಾರ

# ಉಪ ಕೃಷಿ ನಿರ್ದೇಶಕರ ಕಾರ್ಯಾಲಯ, ಯಾದಗಿರಿ–585202

ದೂರವಾಣಿ ಸ ಖ್ಯೆ: 08473 – 253754

Email: ddaagriyadagiri@gmail.com

ಸಂಖ್ಯೆ: ಉಕೃನಿಯಾ/ತಾಂ/RFMSC/ಪ್ರಕಟಣೆ/2017–18

ದಿನಾಂಕ: 21.12.2017

## ಪತ್ರಿಕಾ ಪ್ರಕಟಣೆ

ಕೃಷಿ ಇಲಾಖೆ ರಾಜ್ಯ ವಲಯ ಯೋಜನೆಯಡಿಯಲ್ಲಿ ಗ್ರಾಮೀಣ ಮಟ್ಟದಲ್ಲಿ ಯಾದಗಿರಿ ಜಿಲ್ಲೆಯಲ್ಲಿ ಒಂದು, ಕೃಷಿ ಯಂತ್ರೋಪಕರಣಗಳ ಅಥವಾ ಸೇವಾ ಕೇಂದ್ರ ತೆರೆಯಲು ಗ್ರಾಮೀಣ ಯುವಕರಿಂದ ಅರ್ಜಿ ಆಹ್ವಾನಿಸಿದೆ. ಕೃಷಿ ಯಂತ್ರೋಪಕರಣ, ಪಂಪ್‌ಸೆಟ್, ಬೋರೆವೆಲ್ ಹಾಗೂ ಸೂಕ್ಷ್ಮ ನೀರಾವರಿ ಘಟಕಗಳು ದುರಸ್ತಿಗೆ ಒಳಗಾದಾಗ ರೈತರಿಗೆ ಇವುಗಳ ರಿಪೇರಿ ಮಾಡಿಕೊಡಲು ಅನುಕೂಲವಾಗುತ್ತದೆ. ಗ್ರಾಮೀಣ ಯುವಕರನ್ನು ಕೃಷಿಯೆಡೆಗೆ ಆಕರ್ಷಿಸಲು ಮತ್ತು ಸ್ಥಳೀಯ ಸಣ್ಣ ಕೃಷಿ ಉಪಕರಣ ತಯಾರಿಕೆ ಸೌಲಭ್ಯದೊಂದಿಗೆ ಕೃಷಿ ಯಂತ್ರ ಬಳಕೆ ಪ್ರೋತ್ಸಾಹಿಸಲು ಹಾಗೂ ಯುವ ರೈತರನ್ನು ಕೃಷಿಯಲ್ಲಿಯೇ ಮುಂದವರೆಯಲು ಉದ್ಯೋಗವಕಾಶ ಸೃಷ್ಟಿಸುವ ಉದ್ದೇಶದಿಂದ ಈ ಕಾರ್ಯಕ್ರಮ ರೂಪಿಸಲಾಗಿದೆ. ಹೆಚ್ಚು ಕೃಷಿ ಚಟುವಟಿಕೆ ಇರುವ ಹೋಬಳಿಗಳಲ್ಲಿ ಈ ಕೇಂದ್ರ ಸ್ಥಾಪಿಸಲು ನಿರ್ಧರಿಸಲಾಗಿದೆ. ಆಸಕ್ತರು 18 ರಿಂದ 45 ವರ್ಷದೊಳಗಿನವರಾಗಿರಬೇಕು. 20X15 ಅಳತೆ ಕೊಠಡಿ ಅಥವಾ ಗೋದಾಮ ಹೊಂದಿದ, ಕೃಷಿ ಎಂಜಿನೀಯರಿಂಗ್ ಡಿಪ್ಲೋಮಾ, ಕೃಷಿ ಡಿಪ್ಲೋಮಾ, ಆಟೋಮೋಬೈಲ್ ಡಿಪ್ಲೋಮಾ, ಮೆಕ್ಯಾನಿಕಲ್ ಡಿಪ್ಲೋಮಾ, ಐಟಿಐ, ಪಿಯುಸಿ ಪಾಸಾದ ಗ್ರಾಮೀಣ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಒಂದಕ್ಕಿಂತ ಹೆಚ್ಚು ಸಮಾನ ವಿದ್ಯಾರ್ಹತೆ ಹಾಗೂ ಅರ್ಹತೆ ಹೊಂದಿರುವ ಅಭ್ಯರ್ಥಿಗಳಿದ್ದಲ್ಲಿ, ಅಭ್ಯರ್ಥಿಗಳನ್ನು ಲಾಟರಿ ಮೂಲಕ ಆಯ್ಕೆ ಮಾಡಲಾಗುವುದು. ಕೇಂದ್ರಗಳಲ್ಲಿ ಯಂತ್ರೋಪಕರಣ ದುರಸ್ತಿಗೆ ಬೇಕಾದ ಟೂಲ್ ಕಿಟ್ ಗ್ರೈಂಡಿಂಗ್ ಮಶೀನ್, ಹ್ಯಾಡ್ ಡ್ರಿಲ್ಲಿಂಗ್ ಮಶಿನ್, ವೆಲ್ಡಿಂಗ್ ಮಶಿನ್, ಕಟಿಂಗ್ ಮಶಿನ್ ಸೇರಿದಂತೆ ಅವಶ್ಯಕ ಉಪಕರಣ ಹೊಂದಿರಬೇಕು. **ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ 75 ರಷ್ಟು ಅಥವಾ ಗರಿಷ್ಟ ರೂ. 7.50 ಲಕ್ಷಗಳ ಮಿತಿಯೊಳಗೆ ಇವೆರಡರಲ್ಲಿ ಯಾವುದು ಕಡಿಮೆಯೋ ಅದನ್ನು ಸಹಾಯಧನವನ್ನಾಗಿ** ಬ್ಯಾಂಕ್ ಲೋನ್ ಆಧಾರದ ಮೇಲೆ ಒಂದು ಬಾರಿ (Back Ended Subsidy) ಅನುದಾನ ಲಭ್ಯತೆಗೆ ಅನುಗುಣವಾಗಿ ಪ್ರೋತ್ಸಾಹ ಧನವನ್ನು ನೀಡಲಾಗುವುದು. ಪ್ರೋತ್ಸಾಹಧನವನ್ನು ರಾಷ್ಟ್ರೀಕೃತ ಬ್ಯಾಂಕ್, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್, ರಾಜ್ಯ ಸಹಕಾರಿ, ಕೃಷಿ ಮತ್ತು ಗ್ರಾಮೀಣ ಅಭೀವೃದ್ಧಿ ಬ್ಯಾಂಕ್, ಕೋ ಆಪರೇಟಿವ್ ಬ್ಯಾಂಕ್, ನಬಾರ್ಡ್‌ಗಳಿಂದ ಸಾಲ ಪಡೆಯಬೇಕು. ಆಯ್ಕೆಯಾದ ಆಭ್ಯರ್ಥಿಗಳು ಕೃಷಿ ಯಂತ್ರೋಪಕರಣಗಳ ಅಥವಾ ಸೇವಾ ಕೇಂದ್ರಗಳ ಸ್ಥಾಪನೆಗೆ ಕನಿಷ್ಟ 6 ವರ್ಷ ಕಾರ್ಯ ನಿರ್ವಹಿಸಲು ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕು. ತಾಲ್ಲೂಕವಾರು, ವರ್ಗವಾರು ಅಭ್ಯರ್ಥಿ ಆಯ್ಕೆ ಮಾಡಲಾಗುವುದು. 05.01.2018 ರೊಳಗಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದು, ಅರ್ಜಿ ನಮೂನೆ ಮತ್ತು ಮಾರ್ಗಸೂಚಿಯನ್ನು **http://yadgir.nic.in.** ಮೂಲಕ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ರೈತ ಸಂಪರ್ಕ ಕೇಂದ್ರ /ಸಹಾಯಕ ಕೃಷಿ ನಿರ್ದೇಶಕರ ಅಥವಾ ಜಂಟಿ ಕೃಷಿ ನಿರ್ದೇಶಕರ ಕಛೇರಿ ದೂ. 08473–296748. 8277933404 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಉಪ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ತಮ್ಮ ವಿಶ್ವಾಸಿ,

ಉಪ ಕೃಷಿ ನಿರ್ದೇಶಕರು
ಯಾದಗಿರಿ.

Scanned by CamScanner

## ಗ್ರಾಮೀಣಾ ಕೃಷಿ ಯಂತ್ರೋಪಕರಣ/ಸೇವಾ ಕೇಂದ್ರಗಳು ಮಾರ್ಗಸೂಚಿಗಳು:-

ಗ್ರಾಮೀಣ ಯುವಕರನ್ನು ಕೃಷಿಯ ಕಡೆಗೆ ಆಕರ್ಷಿಸಲು ಮತ್ತು ಸ್ಥಳೀಯವಾಗಿ ಸಣ್ಣ ಕೃಷಿ ಉಪಕರಣಗಳ ತಯಾರಿಕೆ ಸೌಲಭ್ಯದೊಂದಿಗೆ ಕೃಷಿ ಯಂತ್ರಗಳ ಬಳಕೆಯನ್ನು ಪ್ರೋತ್ಸಾಹಿಸಲು ಮತ್ತು ಯುವ ರೈತರನ್ನು ಕೃಷಿಯಲ್ಲೇ ಉಳಿಸಿಕೊಳ್ಳುವಲ್ಲಿ ಅವರಿಗೆ ಉದ್ಯೋಗವಕಾಶ ಸೃಷ್ಟಿಸುವ ನಿಟ್ಟಿನಲ್ಲಿ ಗ್ರಾಮೀಣಾ ಕೃಷಿ ಯಂತ್ರೋಪಕರಣ/ಸೇವಾ ಕೇಂದ್ರಗಳ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕೃಷಿ ಯಂತ್ರೋಪಕರಣಗಳು, ಪಂಪುಸೆಟ್‌ಗಳು, Borewellಗಳು ಹಾಗೂ ಸೂಕ್ಷ್ಮ ನೀರಾವರಿ ಘಟಕಗಳು ದುರಸ್ತಿಗೆ ಒಳಗಾದಲ್ಲಿ ಇವುಗಳನ್ನು ರಿಪೇರಿ ಮಾಡುವ ಸೌಲಭ್ಯಗಳು ಪ್ರಮುಖವಾಗಿ ಜಿಲ್ಲಾ ಮಟ್ಟದಲ್ಲಿ ಲಭ್ಯವಿದ್ದು, ರೈತರು ಹೋಬಳಿ/ತಾಲೂಕುಗಳಿಂದ ಜಿಲ್ಲಾ ಕೇಂದ್ರಗಳಿಗೆ ಬರಬೇಕಾಗಿರುತ್ತದೆ. ರೈತರಿಗೆ ಈ ಎಲ್ಲಾ ಸೌಲಭ್ಯಗಳನ್ನು ಸ್ಥಳೀಯವಾಗಿ ಒದಗಿಸಲು ಕೃಷಿ ಯಂತ್ರೋಪಕರಣಗಳು, ಪಂಪುಸೆಟ್ ಗಳು, Borewell ಗಳು ಹಾಗೂ ಸೂಕ್ಷ್ಮ ನೀರಾವರಿ ಘಟಕಗಳ ದುರಸ್ತಿ ಮಾಡುವಲ್ಲಿ ಪೂರಕ ಸೌಲಭ್ಯಗಳನ್ನು ಸೃಷ್ಟಿಸುವ ಪ್ರಾರಂಭಿಕವಾಗಿ ತಾಲೂಕಿನಲ್ಲಿ ಕೃಷಿ ಚಟುವಟಿಕೆಗಳು ಹೆಚ್ಚು ಇರುವ ಹೋಬಳಿಯಲ್ಲಿ ಗ್ರಾಮೀಣ ಕೃಷಿ ಯಂತ್ರೋಪಕರಣ/ಸೇವಾ ಕೇಂದ್ರಗಳನ್ನು ತೆರೆಯಲು ಉದ್ದೇಶಿಸಲಾಗಿರುತ್ತದೆ.

1. ಪಟ್ಟಣ ಪಂಚಾಯತಿ, ಮುನಿಸಿಪಲ್ ಮತ್ತು ನಗರ ಪ್ರದೇಶಗಳನ್ನು ಹೊರತುಪಡಿಸಿ, ತಾಲೂಕು ಕೇಂದ್ರಗಳಲ್ಲಿ ಗ್ರಾಮೀಣಾ ಕೃಷಿ ಯಂತ್ರೋಪಕರಣ/ಸೇವಾ ಕೇಂದ್ರಗಳನ್ನು ಸ್ಥಾಪಿಸುವುದು.
2. ಕಾರ್ಯಕ್ರಮ ಅನುಷ್ಠಾನಕ್ಕಾಗಿ ಪ್ರತಿ ತಾಲೂಕು ಕೇಂದ್ರಕ್ಕೆ ಒಂದರಂತೆ ಕೃಷಿ ಚಟುವಟಿಕೆಗಳು ಹೆಚ್ಚು ಇರುವ ಹೋಬಳಿಯಲ್ಲಿ ಅನುಷ್ಠಾನ ಮಾಡುವುದು.
3. ಕೇಂದ್ರಗಳನ್ನು ಸ್ಥಾಪಿಸಲು ಕನಿಷ್ಠ 20X15 ಅಡಿ ಅಳತೆಯ/ಗೋದಾಮು ಇರಬೇಕು
4. ವಿದ್ಯಾಹರ್ತೆ:

   ಅ. ಕೃಷಿ ಇಂಜಿನಿಯರಿಂಗ್ ಡಿಪ್ಲಮೊ/ಕೃಷಿಯಲ್ಲಿ ಡಿಪ್ಲಮೊ/ಆಟೋಮೊಬೈಲ್ ಡಿಪ್ಲಮೊ/ಮೆಕ್ಯಾನಿಕಲ್ ಡಿಪ್ಲಮೊ/ಐಟಿಐ/ಕಿಗಅ ತೇರ್ಗಡೆ ಹೊಂದಿರುವ ಗ್ರಾಮೀಣ ಯುವಕರನ್ನು ಈ ಯೋಜನೆಗೆ ಪರಿಗಣಿಸತಕ್ಕದ್ದು.

   ಆ. ಕೃಷಿ ವಿಶ್ವವಿದ್ಯಾನಿಲಯದಿಂದ ಕೃಷಿ ಯಂತ್ರೋಪಕರಣಗಳ ದುರಸ್ತಿ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ ತರಬೇತಿ ಪಡೆದಿರುವ ಬಗ್ಗೆ ಪ್ರಮಾಣ ಪತ್ರ ಹೊಂದಿದವರಿಗೆ ಆದ್ಯತೆ ನೀಡಲಾಗುವುದು ಹಾಗೂ ರೈತ ಕುಟುಂಬಕ್ಕೆ ಸೇರಿದವರಾಗಿರತಕ್ಕದ್ದು.
5. ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಸ್ಥಳೀಯ ಅಭ್ಯರ್ಥಿಗಳನ್ನು ಪರಿಗಣಿಸುವುದು ಹಾಗೂ ಅಭ್ಯರ್ಥಿಗಳ ವಯಸ್ಸು ಕನಿಷ್ಠ 18 ವರ್ಷ ಮತ್ತು ಗರಿಷ್ಠ 45 ವರ್ಷ ಮೀರಿರಬಾರದು.
6. ಕೇಂದ್ರಗಳಲ್ಲಿ ಟ್ರ್ಯಾಕ್ಟರ್, ಪವರ್ ಟಿಲ್ಲರ್, ಪಂಪ್ ಸೆಟ್, ಸಸ್ಯ ಸಂರಕ್ಷಣಾ ಉಪಕರಣಗಳು, ಸೂಕ್ಷ್ಮ ನೀರಾವರಿ ಘಟಕಗಳು ಮತ್ತು Borewell ಗಳ ದುರಸ್ತಿಗಳನ್ನೊಳಗೊಂಡಂತೆ ಕೃಷಿ ಚಟುವಟಿಕೆಗಳಿಗೆ ಬೇಕಾದ ಎಲ್ಲಾ ಯಂತ್ರೋಪಕರಣಗಳ ದುರಸ್ತಿಯನ್ನು ಮಾಡುವುದು.
7. ಕೇಂದ್ರಗಳಲ್ಲಿ ಯಂತ್ರೋಪಕರಣಗಳ ದುರಸ್ತಿಗೆ ಬೇಕಾದ Tool kit, Grinding Machine. Hand drilling Machine. Welding Machine, Spot Welding Machine, Cutting Machine, Air Compressor, Bearing Puller ಹಾಗೂ ಇತರೆ ಅವಶ್ಯವಿರುವ ಉಪಕರಂಣಗಳನ್ನು ಹೊಂದಿರಬೇಕಾಗಿರುತ್ತದೆ.
8. ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಶೇ. 50 ರಷ್ಟು ಗರಿಷ್ಠ ರೂ.5.00 ಲಕ್ಷಗಳು ಮತ್ತು ಪ.ಜಾತಿ ಹಾಗೂ ಪ.ಪಂಗಡದ ಫಲಾನುಭವಿಗಳಿಗೆ ಶೆ.75ರಷ್ಟು ಅಥವಾ ಗರಿಷ್ಠ ರೂ.7.50 ಲಕ್ಷಗಳ ಮಿತಿಯೊಳಗೆ ಇವೆರಡರಲ್ಲಿ

ಉಪ ಕೃಷಿ ನಿರ್ದೇಶಕರು
ಯಾದಗಿರಿ

Scanned by CamScanner

9. ಪ್ರೋತ್ಸಾಹ ಧನವನ್ನು ಪಡೆಯಲು ರಾಷ್ಟ್ರೀಕೃತ ಬ್ಯಾಂಕ್‌ಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು (Regional Rural Banks), ರಾಜ್ಯ ಸಹಾಕಾರಿ, ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳು, Scheduled Commercial Bank, Co-Operative Bank, NABARD ಇವುಗಳಿಂದ ಸಾಲ ಪಡೆಯಬೇಕು. ಅನುದಾನ ಲಭ್ಯತೆಗೆ ಅನುಗುಣವಾಗಿ ಪ್ರೋತ್ಸಾಹ ಧನವನ್ನು ನೀಡಲಾಗುವುದು.

10. ಆಯ್ಕೆಯಾದ ಅಭ್ಯರ್ಥಿಯು ಗ್ರಾಮೀಣ ಕೃಷಿ ಯಂತ್ರೋಪಕರಣ/ಸೇವಾ ಕೇಂದ್ರಗಳ ಸ್ಥಾಪನೆಗೆ ಸಂಬಂಧಿಸಿದಂತೆ ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕು ಹಾಗೂ ಈ ಕೇಂದ್ರಗಳ ಕನಿಷ್ಠ 6 ವರ್ಷಗಳ ತನಕ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕು

ಉಪ ಕೃಷಿ ನಿರ್ದೇಶಕರು
ಯಾದಗಿರಿ

Scanned by CamScanner

# ಅರ್ಜಿ ನಮೂನೆ-1

| | | |
|---|---|---|
| 1 | ಅಭ್ಯರ್ಥಿಯ ಹೆಸರು | |
| 2 | ತಂದೆಯ ಹೆಸರು | |
| 3 | ಸರ್ವೆ ನಂ. ಮತ್ತು ವಿಸ್ತೀರ್ಣ (ದೃಢೀಕೃತ ಪಹಣಿ ಲಗತ್ತಿಸಿ) | |
| 4 | ಜನ್ಮ ದಿನಾಂಕ (ದೃಢೀಕೃತ ಎಸ್ಎಸ್ಎಲ್ಸಿ ಪ್ರಮಾಣ ಪತ್ರ ಲಗತ್ತಿಸಿ) | |
| 5 | ವಿಳಾಸ (Permanent Address): | |
| | ಗ್ರಾಮ & ಗ್ರಾಮ ಪಂಚಾಯತಿ | |
| | ತಾಲೂಕು | |
| | ಜಿಲ್ಲೆ | |
| | ಪಿನ್ ಕೋಡ್ ಸಂಖ್ಯೆ | |
| 6 | ಪತ್ರ ವ್ಯವಹರಿಸಲು ಅಂಚೆ ವಿಳಾಸ | |
| 7 | ವಿದ್ಯಾರ್ಹತೆ (ದೃಢೀಕೇರ ಪ್ರಮಾಣ ಪತ್ರಗಳನ್ನು ಮತ್ತು ಅಂಕ ಪಟ್ಟಿಯನ್ನು ಲಗತ್ತಿಸಿ) | |
| ಅ | 1. ಕೃಷಿ ಇಂಜನಿಯರಿಂಗ್ ಡಿಪ್ಲಮೊ | |
| | 2. ಕೃಷಿಯಲ್ಲಿ ಡಿಪ್ಲಮೊ | |
| | 3. ಆಟೋಮೋಬೈಲ್ ಡಿಪ್ಲಮೊ | |
| | 4. ಮೆಕ್ಯಾನಿಕಲ್ ಡಿಪ್ಲಮೊ | |
| | 5. ಐಟಿಐ. | |
| | 6. ಕಗಅ ತೇರ್ಗಡೆಯಾಗಿರಬೇಕು | |
| ಆ | ಕೃಷಿ ವಿಶ್ವವಿದ್ಯಾನಿಲಯದಿಂದ ಕೃಷಿ ಯಂತ್ರೋಪಕರಣಗಳ ದುರಸ್ತಿ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ ತರಬೇತಿ (ದೃಢೀಕೃತ ಪ್ರಮಾಣ ಪತ್ರ ಲಗತ್ತಿಸಿ) | |
| 8. | ಜಾತಿ: (ಸಾಮಾನ್ಯ/ಪರಿಶಿಷ್ಠ.ಜಾತಿ/ಪಂಗಡ)ಪ.ಜಾ/ಪ.ವರ್ಗದವರು ದೃಢೀಕೃತ ಜಾತಿ ಪ್ರಮಾಣ ಪತ್ರನ್ನು ಲಗತ್ತಿಸಿ) | |
| 9 | ಕನಿಷ್ಠ 20X15 ಅಡಿ ಅಳತೆಯ ಕೊಠಡಿ/ಗೋದಾಮು ಹೊಂದಿರುವ ಬಗ್ಗೆ ಅಗತ್ಯ ದಾಖಲಾತಿಗಳು | |
| 10 | ದೂರವಾಣಿ ಸಂಖ್ಯೆ | |
| 11 | ಇ-ಮೇಲ್ ವಿಳಾಸ | |

ಸ್ಥಳ:

ದಿನಾಂಕ:

ಸಹಿ:

ಹೆಸರು:

ಉಪ ಕೃಷಿ ನಿರ್ದೇಶಕರು
ಯಾದಗಿರಿ

Scanned by CamScanner